ಹೊರಡಲು ಸಿದ್ಧನಾದ. ಅಸಿತ್ ಅಂದಕೊಳ್ಳುತ್ತಿದ್ದ, ಸದ್ಯ! ಬಚಾವಾದೆ. ಹಠಾತ್ 'ಜಾತಿ' ಹೆಸರು ಕೇಳಿ ಕೆಂಡದಂಥಾ ಕೋಪ ಬಂತು. ಕಿವಿಗಳು ಕೋಪದಿಂದ ಕೆಂಪಗಾದವು. "ನೀನು ತುಂಬಾ ಒಳ್ಳೆಯವನು ಅಲ್ವಾ? ಸತ್ತ ಮಗನ ಹೆಸರು ಹೇಳ್ಕೊಂಡು ಹಣ ಸಂಪಾದನೆ ಮಾಡೋಕೆ ತಿರುಗ್ತಾ ಇದ್ದೀಯಾ? ಆಹಾ, ಎಂಥ ದೊಡ್ಡ ಮನಸು, ಹೃದಯ ನಿಂದು" ಕಟು ವ್ಯಂಗ್ಯದಲ್ಲಿ ನುಡಿದ ಅಸಿತ್.

ಅವನು ಹೋಗುತ್ತಿದ್ದವನು ದಿಢೀರನೆ ತಿರುಗಿ ನಿಂತ.

ಇಲ್ಲ, ಮುಚ್ಚಿಟ್ಟುಕೊಂಡಿರೋ ಯಾವ ಚಾಕು ಚೂರಿ ಈಚೆಗೆ ತೆಗೆಯಲಿಲ್ಲ. ಬದಲು ಜೋರಾಗಿ ಹೋ ಎಂದು ಅಳಲು ಶುರುಮಾಡಿದ. "ಸರಿಯಾಗಿ ಹೇಳಿದಿರಿ ಬಾಬೂ, ಸರಿಯಾಗಿ ಹೇಳಿದಿರಿ! ಇಲ್ಲ. ಮನಸು ಹೃದಯ ಏನೂ ಇಲ್ಲ. ಬರೀ ಹೊಟ್ಟೆ ಇದೆ. ಬೆಂಕಿಯಂತೆ ಹೊತ್ಕೊಂಡು ಉರಿತಾ ಇರೋ ಒಂದು ಹೊಟ್ಟೆ." ಹೀಗೆ ಹೇಳಿ, ತಿರುಗಿ ಧಡಧಡ ಅಂತ ದಾಪುಗಾಲು ಹಾಕುತ್ತಾ ಹೊರಟು ಹೋದ.

ಬಹುಶಃ ಈ ಬಡಾವಣೆನೆ ಬಿಟ್ಟು ಹೋಗಿರಬೇಕು ಅವನು.

### ಆಶಾಪೂರ್ಣಾದೇವಿ (1909–1995)

1909ರಲ್ಲಿ ಕೋಲ್ಕತ್ತದ ವೈದ್ಯ ಮನೆತನದಲ್ಲಿ ಜನಿಸಿದ ಆಶಾಪೂರ್ಣಾದೇವಿ ಬಂಗಾಳಿಯ ಮುಖ್ಯ ಕವಿ, ಕತೆಗಾರ್ತಿ, ಕಾದಂಬರಿಗಾರ್ತಿ. ಆಗಿನ ಸಂಪ್ರದಾಯಸ್ಥ ಅವಿಭಕ್ತ ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತಿರಲಿಲ್ಲ. ಮನೆಯ ಹುಡುಗರಿಗೆ ಖಾಸಗಿ ಉಪಾಧ್ಯಾಯರನ್ನು ನೇಮಿಸಿ ಪಾಠ ಹೇಳಿಸುತ್ತಿದ್ದರು. ಪುಟ್ಟ ಹುಡುಗಿ ಆಶಾ ಆ ಪಾಠವನ್ನು ಕೇಳಿಸಿಕೊಂಡು ಓದು ಬರಹ ಕಲಿತಳು. ತಂದೆ ಕಲಾವಿದರಾಗಿದ್ದರು, ಸುಸಂಸ್ಕೃತ ಕುಟುಂಬದಿಂದ ಬಂದ ತಾಯಿ ಪುಸ್ತಕ ಪ್ರೇಮಿಯಾಗಿದ್ದರು. ಅವರಿಗೆ ಕತೆ ಪುಸ್ತಕಗಳು ಗ್ರಂಥಾಲಯಗಳಿಂದ ನಿರಂತರವಾಗಿ ಮನೆಗೆ ಬರುತ್ತಿದ್ದವು. ಹುಡುಗಿ ಆಶಾ ಓದನ್ನು ಕಲಿತದ್ದು ಮನೆಗೆ ಬಂದ ಈ ಪುಸ್ತಕಗಳಿಂದ. ಆರಂಭದಲ್ಲಿ ಮಕ್ಕಳಿಗಾಗಿ ಬರೆದರೂ, ಕ್ರಮೇಣ ಸಣ್ಣಕತೆಗಳನ್ನು ಬರೆಯಲು ಶುರುಮಾಡಿದರು. ಮುಖ್ಯ ಕೃತಿಗಳು: 'ಪ್ರಥಮ್ ಪ್ರತಿಶ್ರುತಿ', 'ಸುಬರ್ಣಲತಾ', 'ಬಕುಲ್ ಕಥಾ'. ಅವರಿಗೆ 1976ರಲ್ಲಿ ಜ್ಞಾನಪೀಠ ಪುರಸ್ಕಾರ ನೀಡಲಾಯಿತು.

### ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

### ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ, ಬಂಗಾಳಿ, ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.